ಸುದ್ದಿ ಸಂಚಯ

# ೨೦೨೦ ಜುಲೈ ತಿಂಗಳ ಪರಿಹಾರ ಕಾರ್ಯಗಳು







**ದೇ**ಶದ ಎಲ್ಲೆಡೆ ವ್ಯಾಪಕವಾಗಿ ಹೆಚ್ಚಿರುವ ಕೋವಿಡ್-೧೯ ಸೋಂಕಿನ ಕಾರಣದಿಂದ ಬೇಲೂರು ಮಠ ಪ್ರಧಾನ ಕೇಂದ್ರ ಹಾಗೂ ರಾಮಕೃಷ್ಣ ಮಹಾಸಂಘದ ಬಹುತೇಕ ಶಾಖಾಕೇಂದ್ರಗಳು ಸಾರ್ವಜನಿಕರಿಗಾಗಿ ಮುಚ್ಚಲಾಗಿದ್ದು, ಕೆಲವು ಕೇಂದ್ರಗಳಲ್ಲಿ ಪರಿಹಾರ ಕಾರ್ಯಗಳು ಮುಂದುವರಿದಿವೆ. ಇದರಲ್ಲಿ ನೆರೆ ಪರಿಹಾರ, ಅಂಫಾನ್ ಚಂಡಮಾರುತ ಪರಿಹಾರ, ಕೋವಿಡ್-೧೯ ಪರಿಹಾರ ಹಾಗೂ ಸಂತ್ರಸ್ತರಿಗೆ ಪರಿಹಾರ ಕಾರ್ಯಗಳು ನಡೆದಿವೆ. ಆಗಸ್ಟ್ ೧೦ರ ವರೆಗೆ ಭಾರತದ ವಿವಿಧ ಶಾಖಾಕೇಂದ್ರಗಳು ಹಾಗೂ ವಿದೇಶೀ ಕೇಂದ್ರಗಳು ನಡೆಸಿದ ಪರಿಹಾರ ಕಾರ್ಯಗಳ ವಿವರಗಳು ಇಲ್ಲಿವೆ:

೧) **ನೆರೆ ಪರಿಹಾರ ಕಾರ್ಯ:** ಅಸ್ಸಾಂ ರಾಜ್ಯದಲ್ಲಿ ಜುಲೈ ತಿಂಗಳಲ್ಲಿ ಸುರಿದ ಜಡಿಮಳೆಯಿಂದಾಗಿ ರಾಜ್ಯದ ಹಲವು ಪ್ರದೇಶಗಳಲ್ಲಿ ಮುಳುಗಡೆಯಾಗಿದೆ. **ಗುವಹಾಟಿ** ಆಶ್ರಮವು ಜುಲೈ ೨೦ ಹಾಗೂ ೨೯ರಂದು ೪೮೬ ನಿರಾಶ್ರಿತರಾದ ಕುಟುಂಬಗಳಿಗೆ ದಿನಸಿ ಪದಾರ್ಥಗಳನ್ನು ಹಾಗೂ ಮಾಸ್ಕ್, ಸಾಬೂನು, ಸ್ಯಾನಿಟೈಜರ್ ಮುಂತಾದ ಅಗತ್ಯ ವಸ್ತುಗಳನ್ನು ವಿತರಿಸಿದೆ.

೨) **ಚಂಡಮಾರುತ ಪರಿಹಾರ ಕಾರ್ಯ:** ಮೇ ೨೦ರಂದು ಪಶ್ಚಿಮ ಬಂಗಾಳದ ಹಾಗೂ ಬಾಂಗ್ಲಾದೇಶದ ವಿವಿಧ ಭಾಗಗಳಲ್ಲಿ ಅಪ್ಪಳಿಸಿದ ಅಂಫಾನ್ ಚಂಡಮಾರುತದಿಂದ ಹಾನಿಗೊಳಗಾದ ವಿವಿಧ ಪ್ರದೇಶಗಳಲ್ಲಿ ಪರಿಹಾರ ಕಾರ್ಯ ಮುಂದುವರಿದಿದೆ. **ಸಿಕ್ರಾ ಕುಲೀನಗ್ರಾಮ** ಕೇಂದ್ರವು ಉತ್ತರ ೨೪ ಪರಗಣ ಜಿಲ್ಲೆಯ ೯೦೮ ಕುಟುಂಬಗಳಿಗೆ ಅಕ್ಕಿ, ಬೇಳೆ, ಹಾಲು ಮುಂತಾದ ದಿನಸಿ ಪದಾರ್ಥಗಳನ್ನು ಹಾಗೂ ಇತರ ಅಗತ್ಯ ವಸ್ತುಗಳನ್ನು ವಿತರಿಸಿದೆ.

೩) **ಕೋವಿಡ್-೧೯ ಪರಿಹಾರ ಕಾರ್ಯ:** ದೇಶದೆಲ್ಲೆಡೆ ಕೋವಿಡ್ - ೧೯ ವ್ಯಾಪಿಸಿದ ಹಿನ್ನೆಲೆಯಲ್ಲಿ ಲಾಕ್‌ಡೌನ್‌ನಿಂದಾಗಿ ಹಲವಾರು ಮಂದಿ ಹಸಿವೆ ಹಾಗೂ ಬಡತನದಿಂದ ಪೀಡಿತರಾಗಿದ್ದಾರೆ. ಆರಂಭದಿಂದಲೂ ರಾಮಕೃಷ್ಣ ಮಿಷನ್ನಿನ ಶಾಖಾಕೇಂದ್ರಗಳು ವ್ಯಾಪಕವಾಗಿ ವಿವಿಧ ರೀತಿಯ ಪರಿಹಾರ ಕಾರ್ಯಗಳನ್ನು ನಡೆಸಿವೆ.

**ಭಾರತದಲ್ಲಿ:** **ಕಡಪಾ** ಕೇಂದ್ರವು ಮಾರ್ಚ್ ೨೮ರಿಂದ ಜುಲೈ ೨೦ರ ವರೆಗೆ ೨೦೨೩ ಕುಟುಂಬಗಳಿಗೆ ವಿವಿಧ ದಿನಸಿ ಪದಾರ್ಥಗಳನ್ನು ಹಾಗೂ ಬೇಯಿಸಿದ ಆಹಾರವನ್ನು ವಿತರಿಸಿದೆ. **ಮದುರೈ** ಕೇಂದ್ರವು ಏಪ್ರಿಲ್ ೬ ರಿಂದ ಮೇ ೧೮ರ ವರೆಗೆ ಮದುರೈ ಜಿಲ್ಲೆಯ ೧೩೨೫ ಕುಟುಂಬಗಳಿಗೆ ದಿನಸಿ ಪದಾರ್ಥಗಳನ್ನು ವಿತರಿಸಿದೆ. **ಡೆಹ್ರಡೂನ್** ಕೇಂದ್ರವು ಏಪ್ರಿಲ್ ೧ ರಿಂದ ಜುಲೈ ೯ರ ವರೆಗೆ ೬೫೦ ಕುಟುಂಬಗಳಿಗೆ ದಿನಸಿ ಪದಾರ್ಥಗಳನ್ನು ವಿತರಿಸಿದೆ. **ಅಸನ್ಸೋಲ್** ಕೇಂದ್ರವು ಮಾರ್ಚ್ ೩೧ ರಿಂದ ಜೂನ್ ೬ರ ವರೆಗೆ ಪಶ್ಚಿಮ ವರ್ಧಮಾನ ಜಿಲ್ಲೆಯ ೬೨೦೮ ಕುಟುಂಬಗಳಿಗೆ ದಿನಸಿ ಪದಾರ್ಥಗಳನ್ನು ವಿತರಿಸಿದೆ. **ದಾರ್ಜಿಲಿಂಗ್** ಕೇಂದ್ರವು ಏಪ್ರಿಲ್ ೨ರಿಂದ ಜುಲೈ ೧೦ರ ವರೆಗೆ ಜಿಲ್ಲೆಯ ೧೪೬೫ ಕೇಂದ್ರಳಿಗೆ ದಿನಸಿ ಪದಾರ್ಥಗಳನ್ನು ವಿತರಿಸಿದೆ. **ನೌರಾ** ಕೇಂದ್ರವು ಜುಲೈ ೫ ರಂದು ದಕ್ಷಿಣ ೨೪ ಪರಗಣ ಜಿಲ್ಲೆಯ ೬೧೯೨ ಕುಟುಂಬಗಳಿಗೆ ವಿವಿಧ ದಿನಸಿ ಪದಾರ್ಥಗಳನ್ನು ವಿತರಿಸಿದೆ.

**ವಿದೇಶಗಳಲ್ಲಿ:** **ಬಾಂಗ್ಲಾದೇಶ:** **ಬಾಗೇರ್‌ಹಾಟ್** ಆಶ್ರಮವು ಮಾರ್ಚ್ ೨೮ರಿಂದ ಜುಲೈ ೨೬ರ ತನಕ ೯೧೧ ಕುಟುಂಬಗಳಿಗೆ ವಿವಿಧ ದಿನಸಿ ಪದಾರ್ಥಗಳನ್ನು ವಿತರಿಸಿದೆ. **ಫಿಜಿ** ಕೇಂದ್ರವು ಜುಲೈ ತಿಂಗಳಲ್ಲಿ ೨೨೫೦ ಪ್ಲೇಟ್ ಆಹಾರವನ್ನು ವಿತರಿಸಿದೆ; ಇತರ ಅಗತ್ಯವಿರುವ ವಸ್ತುಗಳನ್ನೂ ವಿತರಿಸಿದೆ. **ದಕ್ಷಿಣ ಆಫ್ರಿಕ:** **ಡರ್ಬನ್** ಕೇಂದ್ರ ತನ್ನ ಇತರ ಉಪ-ಕೇಂದ್ರಗಳೊಂದಿಗೆ ಜುಲೈ ತಿಂಗಳಲ್ಲಿ ೩೪೫ ಕುಟುಂಬಗಳಿಗೆ ವಿವಿಧ ದಿನಸಿ ಪದಾರ್ಥಗಳನ್ನು ಹಾಗೂ ಇತರ ಅಗತ್ಯ ವಸ್ತುಗಳನ್ನು ವಿತರಿಸಿದೆ. **ಫೀನಿಕ್ಸ್** ಕೇಂದ್ರವು ತನ್ನ ಜೋಹಾನ್ಸ್‌ಬರ್ಗ್ ಉಪ-ಕೇಂದ್ರದೊಂದಿಗೆ ಜುಲೈ ತಿಂಗಳಿನಲ್ಲಿ ವಿವಿಧ ದಿನಸಿ ಪದಾರ್ಥಗಳನ್ನು ವಿತರಿಸಿದೆ, ಇದರೊಂದಿಗೆ ಸಂತ್ರಸ್ತರಿಗೆ ನಿಯಮಿತವಾಗಿ ಆಹಾರ ಹಾಗೂ ಔಷಧ ವಿತರಣೆಯನ್ನೂ ಮಾಡಿದೆ.







Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020